

## ಪ್ರೇಕ್ಷಕ ಈಗ ತೀರ್ಪುಗಾರ

ಒಬ್ಬ ರೈತ ಟೊಮ್ಯಾಟೊ ಬೆಳೆ ಹಾಕಿ, ಶ್ರಮ–ಶ್ರದ್ಧೆಯಿಂದ ಫಸಲು ಬೆಳೆದು ಒಳ್ಳೆಯ ಬೆಲೆ ಬಂದು ಲಾಭ ಪಡೆದುಬಿಟ್ಟರೆ, ಆ ಲಾಭ ನೋಡಿ ಆ ಊರವರೆಲ್ಲರೂ ಟೊಮ್ಯಾಟೊ ಬೆಳೆಯಲು ಮುಂದಾಗುತ್ತಾರೆ. ಆದರೆ ಎಲ್ಲರೂ ಟೊಮ್ಯಾಟೊ ಬೆಳೆ ಹಾಕಿದಾಗ ಅದರ ಬೆಲೆ ಬೀಳುವುದು ಸಹಜವೇ ಅಲ್ಲವೇ? ಇದು 'ಅನುಕರಣೆ'ಯ ಫಲ. ಚಿತ್ರರಂಗದಲ್ಲೂ ಇದೇ ಆಗುತ್ತಿದೆ.

ಕಥೆಯಲ್ಲಿ ವೈವಿಧ್ಯ ಬೇಕು. ಒಂದು ಲವ್ ಸ್ಟೋರಿ, ಇನ್ನೊಂದು ಹಾರರ್, ಮತ್ತೊಂದು ಆ್ಯಕ್ಷನ್ – ಹೀಗೆ ಜನರ ನಾಡಿಮಿಡಿತವನ್ನು ಅರ್ಥ ಮಾಡಿಕೊಂಡು ಅನುಭವಗಳನ್ನು ಒಟ್ಟುಗೂಡಿಸಿ ಸಿನಿಮಾ ಮಾಡುವುದು ತುಂಬಾ ಮುಖ್ಯ. ಜೊತೆಗೆ ಉತ್ತಮ ಪ್ರಯತ್ನ, ಒಳ್ಳೆಯ ತಂಡ, ಶ್ರಮ ಇದ್ದರೆ ಗೆಲುವು ಸಿಕ್ಕೇ ಸಿಗುತ್ತದೆ. ಅದಕ್ಕೆ ಈಚಿನ ಉದಾಹರಣೆ, 'ಭೀಮ' ಸಿನಿಮಾ.

ಈ ವರ್ಷ ಇದುವರೆಗೆ ಬಿಡುಗಡೆಯಾಗಿರುವ ಸಿನಿಮಾಗಳ ಮೇಲೆ ಕಣ್ಣಾಡಿಸಿದಾಗ ಅವಸರಕ್ಕೋ, ನಿರ್ಮಾಪಕರು ಸಿಕ್ಕಿದ್ದಾರೆ ಎಂದೋ, ಕಾಲ್‌ಶೀಟ್ ಸಿಕ್ಕಿದೆ ಎಂತಲೋ ಅಥವಾ ಬದುಕುವುದಕ್ಕೋ ಸಿನಿಮಾ ಮಾಡಿದ್ದು ಎದ್ದು ಕಾಣುತ್ತದೆ. ಇದು ಎಲ್ಲಾ ಕಾಲದಲ್ಲೂ ಇರುತ್ತದೆ ಕೂಡ.

ಆದರೆ ಕೊರೊನಾ ನಂತರ ಜಗತ್ತೇ ರಿಫ್ರೆಷ್ ಆಗಿದೆ. ಆಹಾರ ಪದ್ಧತಿ ಬದಲಾಗಿದೆ, ಬದುಕುವ ರೀತಿ ಬದಲಾಗಿದೆ, ಆಲೋಚನೆಗಳು ಬದಲಾಗಿವೆ. ಮನರಂಜನೆ ವಿಷಯದಲ್ಲಿ ಜನರು ಹಿಂದಿಗಿಂತಲೂ ಹೆಚ್ಚು ಪ್ರಶ್ನೆ ಮಾಡುವವರಾಗಿದ್ದಾರೆ. ಜನರು ಹಣ, ಸಮಯ ನಮಗೆ ಕೊಡುತ್ತಿದ್ದಾರೆ ಎಂದಾಗ ಸಿನಿಮಾವನ್ನು ಪ್ರಶ್ನಿಸುವಂತೆ ಕೂತಿರುತ್ತಾರೆ. ಅವರಲ್ಲಿ ಉದ್ಭವವಾಗುವ ಪ್ರಶ್ನೆಗಳಿಗೆ ಮನರಂಜನಾತ್ಮಕವಾಗಿ ಉತ್ತರ ಕೊಟ್ಟಾಗ ಸಿನಿಮಾ ಅವರದ್ದಾಗುತ್ತದೆ. ಅವರಿಗೆ ಉತ್ತರ ಕೊಡದೇ ಸ್ಕಿಪ್ ಮಾಡಿದಾಗ, ಚಿತ್ರ ರುಚಿಸುವುದಿಲ್ಲ. ಪ್ರೇಕ್ಷಕ ಈಗ ತೀರ್ಪುಗಾರ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಈಗ ಪ್ರಚಾರ ಕೂಡ ಅತಿ ಮುಖ್ಯ ಟೂಲ್. ಕಂಟೆಂಟ್ ಗಟ್ಟಿಯಿದ್ದರೆ ಆ ಸಿನಿಮಾ ತಲುಪಿಸಲು ಪ್ರಚಾರ ತಂತ್ರ ಉಪಯೋಗಿಸಬೇಕು. ಆದರೆ ಕಂಟೆಂಟ್ ಗಟ್ಟಿಯಿಲ್ಲದಿದ್ದರೆ ಪ್ರಚಾರತಂತ್ರವೂ ನೆಗೆಟಿವ್ ಆಗುತ್ತದೆ. ಬರವಣಿಗೆ, ಕಥೆ, ಸಂಗೀತ – ಇವೆಲ್ಲ ಅಂಶಗಳಲ್ಲೂ ಆಲೋಚಿಸಿ ಮುಂದಡಿ ಇಡಬೇಕು. ಜನರ ಹತ್ತಿರ ಒಂದು ಸಿನಿಮಾ ತಲುಪಲು 7–8 ಮೆಟ್ಟಿಲು ಇರುತ್ತದೆ. ಅದೆಲ್ಲವನ್ನೂ ಜಾಗರೂಕವಾಗಿ ಮಾಡಬೇಕು.

ಕಂಟೆಂಟ್, ದೃಶ್ಯಾವಳಿಗಳು, ಸಂಗೀತ, ಸಾಹಿತ್ಯ, ಸಂಭಾಷಣೆ ರುಚಿಯಾಗಿದ್ದಾಗ, ಹಿಡಿಸಿದಾಗ ಹೆಚ್ಚು ಜನರಿಗೆ ತಲುಪುತ್ತದೆ. ಭರವಸೆ ಇಟ್ಟುಕೊಂಡು ನೋಡಿ ರುಚಿಸದೇ ಬೇಸರ ಬಂದಾಗ ಕೈ ಚೆಲ್ಲುತ್ತಾರೆ. ನನ್ನ ಪ್ರಕಾರ ಒಳ್ಳೆಯ ಕಂಟೆಂಟ್ ಇರುವ ಸಿನಿಮಾ ಸೋಲುವುದು ಅತಿ ವಿರಳ.

–ಮಾಸ್ತಿ
ಸಂಭಾಷಣಾಕಾರ

ಯಶಸ್ಸಿನ ಲಹರಿ 2023ರಲ್ಲಿ ಮುಂದುವರೆಯಲಿಲ್ಲ. 'ಪ್ಯಾನ್ ಇಂಡಿಯಾ' ಹಣೆಪಟ್ಟಿ ಸಿನಿಮಾಗಳ ವೈಯಕ್ತಿಕ ಗೆಲುವಿಗೆ ನೆರವಾಯಿತೇ ಹೊರತು, ಚಿತ್ರೋದ್ಯಮದ ಒಟ್ಟಾರೆ ಬೆಳವಣಿಗೆಗೆ ಪೂರಕವಾಗಿ ಪರಿಣಮಿಸಲಿಲ್ಲ.

2023ರಲ್ಲಿ ಬಿಡಿಬಿಡಿಯಾಗಿ ಗುಡುಗು ಮಿಂಚು ಕಾಣಿಸಿತಾದರೂ, ಅದು ಮಳೆಯಾಗಿಯೇನೂ ರೂಪುಗೊಳ್ಳಲಿಲ್ಲ. ಆರ್. ಚಂದ್ರು ನಿರ್ದೇಶನದಲ್ಲಿ ಉಪೇಂದ್ರ ಮುಖ್ಯ ಪಾತ್ರದಲ್ಲಿ ಹಾಗೂ ಶಿವರಾಜ್‌ಕುಮಾರ್, ಸುದೀಪ್ ಗೌರವ ಪಾತ್ರಗಳಲ್ಲಿ ನಟಿಸಿದ್ದ 'ಕಬ್ಜ' ಹಾಗೂ ದರ್ಶನ್ ನಟನೆಯ 'ಕ್ರಾಂತಿ' (ನಿ: ವಿ. ಹರಿಕೃಷ್ಣ) ಚಿತ್ರಗಳು ನಿರೀಕ್ಷಿತ ಗೆಲುವು ದಾಖಲಿಸಲಿಲ್ಲ. ಹೇಮಂತ ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಶೀರ್ಷಿಕೆಯ 'ಸೈಡ್ ಎ' ಮತ್ತು 'ಸೈಡ್ ಬಿ' ಸಿನಿಮಾಗಳು ಉತ್ತಮ ಪ್ರಯತ್ನಗಳೆಂದು ಗುರ್ತಿಸಿಕೊಂಡರೂ ಗಲ್ಲಾಪೆಟ್ಟಿಗೆಯ ಲೆಕ್ಕಾಚಾರದಲ್ಲಿ ಗೆಲ್ಲಲಿಲ್ಲ. ರಾಜ್ ಬಿ. ಶೆಟ್ಟಿ ನಟನೆಯ 'ಟೋಬಿ' (ನಿ: ಬಾಸಿಲ್ ಅಲ್ಚಲಕ್ಕಲ್) ಹಾಗೂ ಅವರ ನಟನೆ–ನಿರ್ದೇಶನ ಎರಡನ್ನೂ ಒಳಗೊಂಡ 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾಗಳು ಕೂಡ ಹಣಕಾಸಿನ ಯಶಸ್ಸು ಪಡೆಯಲಿಲ್ಲ.

ಕೊರೊನಾ ಸಮಯದಲ್ಲಿ ಕನ್ನಡ ಚಿತ್ರರಂಗ ಮಾತ್ರವಲ್ಲ, ಭಾರತೀಯ ಭಾಷೆಗಳ ಚಿತ್ರೋದ್ಯಮ ಸೇರಿದಂತೆ ವಿಶ್ವದೆಲ್ಲೆಡೆ ಸಿನಿಮಾ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಆದರೆ, ಕೊರೊನಾ ನಂತರ ಎಂದಿನಂತೆ ಚಿತ್ರೋದ್ಯಮದ ಚಟುವಟಿಕೆಗಳು ಚಿಗಿತುಕೊಂಡವು. ನೆರೆಯ ಮಲೆಯಾಳಂ ಚಿತ್ರೋದ್ಯಮ ಹೊಸ ಪ್ರಯೋಗಗಳಿಂದ ಕಂಗೊಳಿಸುತ್ತಿದೆ. ತಾರಾ ವರ್ಚಸ್ಸಿನ ನಟರ ಸಿನಿಮಾಗಳು ನಿಯಮಿತವಾಗಿ ಬಿಡುಗಡೆಯಾಗುವುದರೊಂದಿಗೆ ತೆಲುಗು ಚಿತ್ರರಂಗ ಕೂಡ ಲವಲವಿಕೆಯಿಂದಿದೆ. ಬಿಕ್ಕಟ್ಟುಗಳ ಜೊತೆಗೆ ಯಶಸ್ಸಿನ ಗ್ರಾಫ್ ಕೂಡ ಗಮನಾರ್ಹವಾಗಿರುವುದರಿಂದ ತಮಿಳು ಚಿತ್ರರಂಗ ಕೂಡ ಕಂಗೆಡುವ ಸ್ಥಿತಿ ಮುಟ್ಟಿಲ್ಲ. ಹತಾಶೆಯಿಂದ ಕುಸಿದಿರುವುದು ಕನ್ನಡ ಚಿತ್ರರಂಗವಷ್ಟೇ.

### ಕಳಾಹೀನ, ಜವಾಬ್ದಾರಿಹೀನ ತಾರೆಗಳು

ಕನ್ನಡ ಚಿತ್ರರಂಗದ ಸೋಲಿನ ಕಾರಣಗಳಲ್ಲೊಂದಾಗಿ ಜನಪ್ರಿಯ ನಾಯಕ ನಟರ ಬದ್ಧತೆಯ ಕೊರತೆಯನ್ನು ಗುರ್ತಿಸಬಹುದು. ಯಶ್, ಸುದೀಪ್, ಶಿವರಾಜ್‌ಕುಮಾರ್, ಧ್ರುವ ಸರ್ಜಾ, ರಕ್ಷಿತ್ ಶೆಟ್ಟಿ, ದರ್ಶನ್ – ಹೀಗೆ ಕನ್ನಡ ಚಿತ್ರರಂಗದಲ್ಲಿನ ಸದ್ಯದ ಬೇಡಿಕೆಯ ನಟರನ್ನು ಪಟ್ಟಿ ಮಾಡಬಹುದು. ಇವರಲ್ಲಿ ಶಿವರಾಜ್‌ಕುಮಾರ್ ಒಬ್ಬರನ್ನು ಹೊರತುಪಡಿಸಿದರೆ ಉಳಿದವರೆಲ್ಲ ತಂತಮ್ಮ ದಂತಗೋಪುರಗಳಲ್ಲಿ ಉಳಿದಿರುವಂತಿದೆ.

ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಕರೆತರುವಲ್ಲಿ ಮುಂಚೂಣಿಯಲ್ಲಿರುವ ದರ್ಶನ್ ಸದ್ಯಕ್ಕೆ ಕೊಲೆ ಪ್ರಕರಣವೊಂದರಲ್ಲಿ ಆರೋಪಿಯಾಗಿ ಜೈಲಿನಲ್ಲಿದ್ದಾರೆ. 2023ರ ಕೊನೆಯಲ್ಲಿ ತೆರೆಕಂಡ 'ಕಾಟೇರ' ಚಿತ್ರದ ದೊಡ್ಡ ಗೆಲುವಿನಿಂದಾಗಿ ದರ್ಶನ್‌ರ ಮುಂದಿನ ಸಿನಿಮಾಗಳು ನಿರೀಕ್ಷೆ ಹುಟ್ಟಿಸಿದ್ದವು. ಆದರೆ, ತಮ್ಮ ದುಡುಕು


ಗೆಲುವಿನ ಪಾರ್ಟಿಯಾಗದ 'ಬ್ಯಾಚುಲರ್ ಪಾರ್ಟಿ'